ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 740 (1249)

ಶ್ರೀ ಎಂ. ಸಿದ್ಧಮಾದಯ್ಯ (ಕೊಳ್ಳೇಗಾಲ) :– ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೊಳ್ಳೇಗಾಲ ತಾಲ್ಲೂಕಿನಲ್ಲಿರುವ ಹಸಿರು ಮತ್ತು ಕೆಂಪು ಚೀಟಿದಾರರಿಗೆ ಆಹಾರ ಪದಾರ್ಥಗಳು ಸರಬರಾಜು ಆಗುತ್ತಿಲ್ಲದಿರುವುದು ನಿಜವೆ ?

ಆ) ಹಾಗಿದ್ದಲ್ಲಿ, ಇದನ್ನು ಸರಿಪಡಿಸಿ ಅಲ್ಲಿನ ಜನತೆಗೆ ಯಾವುದೇ ರೀತಿ ತೊಂದರೆಯಿಲ್ಲದಂತೆ ಆಹಾರ ಪದಾರ್ಥಗಳನ್ನು ಸರಬರಾಜು ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೆ ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :–

ಅ) ಕೊಳ್ಳೇಗಾಲ ತಾಲ್ಲೂಕಿನ ಹಸಿರು, ಕೇಸರಿ ಪಡಿತರ ಚೀಟಿದಾರರಿಗೆ 1990 ರ ಏಪ್ರಿಲ್ ಮಾಹೆಯಿಂದ 1990ರ ನವೆಂಬರ್ ಮಾಹೆಯವರೆಗೆ ಒಟ್ಟು 28,110 ಕ್ವಿಂ. ಅಕ್ಕಿ, 6809 ಕ್ವಿಂ. ಗೋಧಿ 6,671 ಕ್ವಿಂ. ಸಕ್ಕರೆ 69,000 ಕೆ. ಜಿ. ತಾಳೆಎಣ್ಣೆ ಮತ್ತು 882 ಕೆ. ಎಲ್. ಸೀಮೆಎಣ್ಣೆಯನ್ನು ಸಂಬಂಧಪಟ್ಟ ಸಗಟು ಕೇಂದ್ರದವರಿಂದ ಎತ್ತುವಳಿ ಮಾಡಿಸಿ, ನಂತರ ಆಹಾರ ಪರಿವೀಕ್ಷಕರ ಮೇಲ್ವಿಚಾರಣೆಯಲ್ಲಿ ನ್ಯಾಯಬೆಲೆ ಅಂಗಡಿ ಸೇವಾ ಸಹಕಾರ ಸಂಘಗಳ ಮುಖೇನ ಸಮರ್ಪಕವಾಗಿ ವಿತರಣೆ ಮಾಡಲಾಗುತ್ತಿದೆ. ಸರ್ಕಾರದ ಆದೇಶ ಸಂಖ್ಯೆ ಎಫ್‌ಟಿಡಿ. 57 ಡಿಆರ್‌ಎ 90 ದಿನಾಂಕ 8–11–90 ರಂತೆ ವಿಧಾನಸಭಾ ಕ್ಷೇತ್ರಾವಾರು ಜಾಗೃತ ಸಮಿತಿಗಳನ್ನು ರಚಿಸಲಾಗಿದ್ದು, ಸದರಿ ಸಮಿತಿಯಲ್ಲಿ ಶಾಸಕರು ಅಧ್ಯಕ್ಷರಾಗಿ ಕಂದಾಯ ಉಪ–ವಿಭಾಗಾಧಿಕಾರಿಗಳು ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸುವರು. ಈ ಸಮಿತಿಯಲ್ಲಿ ಪಡಿತರ ಚೀಟಿದಾರರ ಕುಂದು ಕೊರತೆಗಳನ್ನು ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಂಡು ಆಹಾರ ವಿತರಣೆ ಕಾರ್ಯವು ಸರಿಯಾಗಿ ನಡೆಯುವಂತೆ ನೋಡಿಕೊಳ್ಳುವರು.

ಆ) ಆಹಾರ ಪದಾರ್ಥಗಳು ಸಮರ್ಪಕವಾಗಿ ವಿತರಣೆ ಆಗುತ್ತಿಲ್ಲ ಎಂಬ ಬಗ್ಗೆ ದೂರುಗಳು ಬಂದಿಲ್ಲ ದೂರುಗಳು ಬಂದಲ್ಲಿ ಆ ಬಗ್ಗೆ ವಿಚಾರಣೆ ನಡೆಸಿ ಸಮರ್ಪಕ ವಿತರಣೆ ನಡೆಸಿ ಅಗತ್ಯ ಕ್ರಮ ಕೈಗೊಳ್ಳಲಾಗುತ್ತದೆ

ವಿಷಯ :– ಉಡುಪಿ ತಾಲ್ಲೂಕಿನಲ್ಲಿರುವ ಕೋಟೆ ಮತ್ತು ಬ್ರಹ್ಮಾವರ ಪೋಲೀಸ್ ಠಾಣೆಗಳಲ್ಲಿ ಸಿಬ್ಬಂದಿ ಮತ್ತು ಸೌಲಭ್ಯಗಳ ಕೊರತೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 741 (1151)

ಶ್ರೀ ಪಿ. ಬಸವರಾಜ್ (ಬ್ರಹ್ಮಾವರ) :– ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಉಡುಪಿ ತಾಲ್ಲೂಕಿನ ಬ್ರಹ್ಮಾವರ ಮತ್ತು ಕೋಟೆ ಆರಕ್ಷರ ಠಾಣೆಗಳಲ್ಲಿ ಗಮನಾರ್ಹವಾಗಿ ಸಿಬ್ಬಂದಿಗಳ ಕೊರತೆ ಇರುವುದು, ಇದರಿಂದ ಶಾಂತಿ ಪಾಲನೆಗೆ ಅನಾನುಕೂಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಬಂದಿದ್ದರೆ, ಈ ಕೊರತೆಯನ್ನು ಯಾವಾಗ ತುಂಬಲಾಗುವುದು.

ಆ) ತುರ್ತು ಶಿಸ್ತು, ಶಾಂತಿ ಪಾಲನೆಗೆ ಅನುಕೂಲವಾಗುವಂತೆ ಆರಕ್ಷಕ ಠಾಣೆಗಳಿಗೆ ಜೊತೆಯಾಗಿ ವಾಹನವನ್ನು ಕಲ್ಪಿಸುವ ಅಗತ್ಯ ಮತ್ತು ಈ ಬಗ್ಗೆ ಪರಿಶೀಲನೆ ಸರ್ಕಾರದ ಗಮನದಲ್ಲಿದೆಯೇ ?

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್ (ಗೃಹ ಸಚಿವರು) :–

ಅ) ಹೌದು, ಪರಿಶೀಲನೆಯಲ್ಲಿದೆ.

ಆ) ಹೌದು.

ವಿಷಯ :– ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ನ್ಯಾಯಬೆಲೆ ಅಂಗಡಿಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 742 (1261)